

ಈ ಕೆಲಸ ಮಾಡುವವರ ಪುನರ್ವಸತಿಗೆ ನಿಗದಿಪಡಿಸಿದ ಒಟ್ಟು ಆಯವ್ಯಯ ₹ 933.1 ಕೋಟಿ. 2014–15ರಲ್ಲಿ 448 ಕೋಟಿ, 2015––16ರಲ್ಲಿ 470.1 ಕೋಟಿ, 2016–17ರಲ್ಲಿ 10 ಕೋಟಿ ಮತ್ತು 2017–18ರಲ್ಲಿ ಕೇವಲ 5 ಕೋಟಿ ರೂಪಾಯಿ. ಇದೇ ವರ್ಷದ ಮಾರ್ಚ್ ಸಂಸತ್ ಅಧಿವೇಶನದಲ್ಲಿ ಪುನರ್ವಸತಿಗೆ ನಿಗದಿಪಡಿಸಿದ ಹಣ ಎಷ್ಟು ಎಂದು ಕೇಳಿದ ಪ್ರಶ್ನೆಗೆ ನೀಡಿದ ಉತ್ತರ ಇದು. 2014–16ರ ಅವಧಿಯಲ್ಲಿ ನಿಗದಿಪಡಿಸಿದ ಹಣ ಪೂರ್ಣ ಖರ್ಚಾಗದೇ ಉಳಿದಿದ್ದರಿಂದ, ಈ ಎರಡು ವರ್ಷಗಳಿಗೆ ಕಡಿತ ಮಾಡಲಾಗಿದೆ. ಈಗ ಮತ್ತದೇ ಪ್ರಶ್ನೆ: ಶೌಚಾಲಯ ನಿರ್ಮಾಣದ ಜಾಹೀರಾತು ಮತ್ತು ಪ್ರಚಾರಕ್ಕೆ ಇಷ್ಟೆಲ್ಲ ದುಂದು ವೆಚ್ಚ ಮಾಡುತ್ತಿರುವ ಸರ್ಕಾರ ಅದೇ ಮಲದ ಗುಂಡಿಗಳನ್ನು ಸ್ವಚ್ಛಪಡಿಸಲು ತಂತ್ರಜ್ಞಾನ ಅಭಿವೃದ್ಧಿಪಡಿಸಲು ಯಾಕೆ ಹಣ ಖರ್ಚು ಮಾಡುವುದಿಲ್ಲ?

‘ಸಫಾಯಿ ಕೆಲಸ ಒಂದು ಆಧ್ಯಾತ್ಮಿಕ ಅನುಭೂತಿಯದು’ ಎಂದಿದ್ದರು ನಮ್ಮ ಪ್ರಧಾನಿಯವರು. ಹಾಗಿದ್ದರೆ ಈ ಅದ್ಭುತ ಆಧ್ಯಾತ್ಮಿಕ ಅನುಭೂತಿ ಒಂದೇ ಸಮುದಾಯಕ್ಕೆ ಸೀಮಿತವಾಗಿರುವುದು ಏಕೆ?

‘ಇಷ್ಟೆಲ್ಲ ನಗರಗಳನ್ನು ಮತ್ತು ಹಳ್ಳಿಗಳನ್ನು ಬಹಿರ್ದೆಸೆ ಮುಕ್ತ, ಒಡಿಎಫ್ ಎಂದು ಘೋಷಿಸಿದ್ದೇವಲ್ಲ, ಒಂದೇ ಒಂದು ನಗರವನ್ನು ‘‘ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ಫ್ರೀ ನಗರ’’ ಅಂತ ಸಾಧಿಸಿ ತೋರಿಸಿ’ ಎಂದು ಬೇಜವಾಡ ವಿಲ್ಸನ್ ಸವಾಲು ಹಾಕುತ್ತಾರೆ. ಈ ಸವಾಲಿಗೆ ಉದ್ದದ ಪೊರಕೆ ಹಿಡಿದು ಕಸಹೊಡೆಯುವ ಪೋಸು ಕೊಡುವ ಪ್ರಧಾನಿಯವರಾಗಲೀ ಗ್ರಾಮೀಣ ಅಭಿವೃದ್ಧಿ ಸಚಿವೆಯಾಗಲೀ ಉತ್ತರಿಸುವರೇ?

ಎಷ್ಟೋ ರಾಜ್ಯ ಸರ್ಕಾರಗಳು ತಮ್ಮಲ್ಲಿ ಮಲದ ಗುಂಡಿ ಮತ್ತು ಚರಂಡಿ ಗುಂಡಿಯನ್ನು ಕೈಯಿಂದ ಸ್ವಚ್ಛಪಡಿಸುವವರು ಇಲ್ಲವೇ ಇಲ್ಲ ಎನ್ನುತ್ತವೆ. ಮಲದಗುಂಡಿಯಲ್ಲಿ ಕೆಲಸ ಮಾಡುವವರ ನೋವಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಕ್ಷಾತೀತವಾಗಿ ಕಿವುಡಾಗಿವೆ, ಕುರುಡಾಗಿವೆ. ನಾಗರಿಕ ಸಮಾಜಕ್ಕೆ ಕೂಡ ಇವರು ನೆನಪಾಗುವುದು ತಮ್ಮ ಮನೆಯ, ಫ್ಲಾಟ್‌ಗಳ ಸೆಪ್ಟಿಕ್ ಟ್ಯಾಂಕುಗಳು ತುಂಬಿದಾಗ ಮಾತ್ರ. ಸಮಾಜ–ಸರ್ಕಾರ ಹೊಲಸು ಗುಂಡಿ ಸ್ವಚ್ಛಪಡಿಸುವುದನ್ನು ಒಂದು ಸಮುದಾಯಕ್ಕೆ ಹೊರೆಸಿರುವುದು ನಮ್ಮ ದೇಶದಲ್ಲಿ ಮಾತ್ರ. ■


ನಂ.1 ವಶೀಕರಣ ಮೋಡಿಗಾರರು – ದೈವಜ್ಞ ಪಂ. ಸಾಯಿದೀಕ್ಷಿತ್ ಗುರೂಜಿ – 9980174116



ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮೋಡಿಗಾರರು

ಚಿಂತಿಸುವ ಅವಶ್ಯಕತೆ ಇಲ್ಲ. ಒಂದು ಫೋನ್‌ಕಾಲಿನಿಂದ ನಿಮ್ಮ ಜೀವನ ಬದಲಾಗುತ್ತದೆ. ಇವರು ನಿಮ್ಮ ನಗರದಲ್ಲಿ ಖಾಯಂ ಆಗಿ ನೆಲೆಸಿದ್ದಾರೆ.

ವಿ. ಸೂಚನೆ: ವಶೀಕರಣ ಸ್ಪೆಷಲಿಸ್ಟ್, ಸ್ತ್ರೀ ವಶೀಕರಣ ಪುರುಷ ವಶೀಕರಣ, ಮಾಟಮಂತ್ರ, ವಿದೇಶ ಪ್ರಯಾಣ, ಲೈಂಗಿಕ ಸಮಸ್ಯೆ ಶತ್ರುಗಳ ನಾಶ ಹಾಗೂ ಹಲವಾರು ಸಮಸ್ಯೆಗಳಿಗೆ ಅಷ್ಟದಿಗ್ಬಂದನ ಶಕ್ತಿ ತಾಂತ್ರಿಕ, ಮಾಂತ್ರಿಕ ಶಕ್ತಿ ಹಾಗೂ ಸರ್ವ ದೈವ ಶಕ್ತಿಗಳ ಮೂಲಕ ಕೇವಲ 5 ದಿನಗಳಲ್ಲಿ ಪರಿಹಾರ ಶತಃಸ್ಸಿದ್ಧ.

ಸ್ತ್ರೀ ಪುರುಷ ವಶೀಕರಣಕ್ಕೆ, ಅಷ್ಟದಿಗ್ಬಂಧನ ಶಕ್ತಿಯಿಂದ ಬಗೆಹರಿಸಲಾಗುವುದು

ನೀವು ಇಷ್ಟ ಪಟ್ಟವರು ನಿಮ್ಮಂತೆ ಆಡಲು ಯಾರಿಂದಲೂ ಆಗದ ಕೆಲಸ ಕೆಲವೇ ಘಂಟೆಗಳಲ್ಲಿ ಸಾದ್ಯ. ನಿಗೂಢ ಗುಪ್ತ ಸಮಸ್ಯೆಗಳೇನೇ ಇರಲಿ ತಕ್ಷಣದಲ್ಲಿ ಪರಿಹಾರ ಸೂಚಿಸುತ್ತಾರೆ.

ಸಮಸ್ಯೆಯನ್ನು ನೋಡಿ ಕರುಣೆ ತೋರಿಸುವುದು ಮನುಷ್ಯತ್ವ. ಅದೇ ಸಮಸ್ಯೆಗೆ ಪರಿಹಾರ ನೀಡುವುದು ದೈವತ್ವ...

ಸಮಸ್ಯೆಗಳಿಗೆ ಫೋನಿನ ಮೂಲಕ 100 ಕ್ಕೆ 101ರಷ್ಟು ಪರಿಹಾರ ಶತ:ಸಿದ್ಧ